ಎತ್ತಿದಳಂತೆ. ಅದನ್ನು ವಿಚಾರಿಸಲೆಂದು ಇವತ್ತು ಬೆಳಿಗ್ಗೆ ಮತ್ತೆ ಕುಟ್ಟಪ್ಪನ ಮನೆಗೆ ಹೋದಾಗ, ಆತ ಹೊರ ಬಂದನಂತೆ. ಹಣೆಯಲ್ಲಿ ಇನ್ನೂ ಮಾಯದ ಗಾಯ. ದೇವಯ್ಯ ಅನಾಮಿಕ ವ್ಯಕ್ತಿಯ ಪ್ರಸ್ತಾಪ ಮಾಡಿದಾಗ, ಕುಟ್ಟಪ್ಪನಿಗೆ ಆಶ್ಚರ್ಯ. ತಾನು ಯಾರನ್ನೂ ಕಂಡಿಲ್ಲವೆಂದು ಆತ ಹೇಳಿದನಂತೆ. ಪೊಲೀಸರಲ್ಲಿ ದೂರು ಕೊಡೋಣ ಎಂದಾಗ ಆತ ಒಪ್ಪಲಿಲ್ಲವಂತೆ. ಹಾಗಿದ್ದರೆ ಕರಮಚಂದರಲ್ಲಿ ತನಿಖೆ ಮಾಡಲು ಹೇಳೋಣವೆಂದಾಗಲೂ, ಅದರ ಅಗತ್ಯವಿಲ್ಲವೆಂದನಂತೆ. ಅಪರಿಚಿತ ವ್ಯಕ್ತಿಗಳು ಬರುತ್ತಾರೆಂದರೆ, ತನಗೆ ತನಿಖೆಯ ಅಗತ್ಯವಿದೆ, ತಾನು ಕರಮಚಂದರಲ್ಲಿ ಹೋಗ್ತೇನೆಂದು ಹೇಳಿ, ನಮ್ಮಲ್ಲಿಗೆ ಬಂದೆ ಅಂತ ದೇವಯ್ಯ ತನ್ನ ಮಾತಿಗೆ ವಿರಾಮ ಹಾಕಿದ.

'ಕುಟ್ಟಪ್ಪನ ಮಾತಿನಲ್ಲಿ ಅರ್ಥವಿದೆ ಅನ್ನಿಸುತ್ತೆ. ಇದರಲ್ಲಿ ತನಿಖೆ ಮಾಡೋದು ಏನಿದೆ?' ನಾನು ಆಕಳಿಸಿದೆ.

'ಹಾಗನ್ನಬೇಡಿ. ಚೂರಿ ಹಣೆಗೆ ತಾಗಿದ್ದು ಹೇಗೆ? ಆ ಅಪರಿಚಿತ ಕುಟ್ಟಪ್ಪನ ಮನೆ ಬಗ್ಗೆ ವಿಚಾರಿಸಿ, ರಾತ್ರಿ ಹೊತ್ತಲ್ಲಿ ಬಂದಿದ್ದೇಕೆ?' ದೇವಯ್ಯ ಮಾತು ಸೇರಿಸಿದ.

'ಬಿದ್ದಪ್ಪ, ದೇವಯ್ಯ ಹೇಳೋದರಲ್ಲೂ ಅರ್ಥವಿದೆ. ನಾವು ಹೇಗೂ ಬಿಡುವಾಗಿದ್ದೇವಲ್ಲ. ಸುಮ್ಮನೆ ನೋಡಿ ಬರೋಣ.'

ಕರಮಚಂದ ಹೀಗೆ ಹೇಳುವುದರೊಂದಿಗೆ ಮನಸ್ಸಿಲ್ಲದ ಮನಸ್ಸಿನ ವಿಚಿತ್ರ ತನಿಖೆ ಆರಂಭಗೊಂಡಿತು.

***

ಬೋಯಿಕೇರಿಯಲ್ಲಿ ತುಸು ಎತ್ತರದ ಜಾಗದಲ್ಲಿತ್ತು ದೇವಯ್ಯನ ಮನೆ. ಮುಖ್ಯ ರಸ್ತೆಯಿಂದ ಹಾವಿನಂತೆ ಬಳಕುತ್ತಾ ಸಾಗುವ ಹಾದಿಯಲ್ಲಿ ಸುಮಾರು ಹತ್ತು ನಿಮಿಷಗಳ ಪಯಣ. ಎರಡು ಪಕ್ಕಗಳಲ್ಲಿ ಎಸ್ಟೇಟು. ಮೊದಲಿಗೆ ನಾವು ದೇವಯ್ಯನ ಮನೆಗೆ ಹೋದೆವು. ಆತ ಕುಟ್ಟಪ್ಪನ ಆಧಾರ್ ಕಾರ್ಡು, ಬಾಡಿಗೆ ಕರಾರಿನ ಪ್ರತಿಗಳನ್ನು ತೋರಿಸಿದ. ಕರಮಚಂದ ಕೂಲಂಕಷವಾಗಿ ಆಧಾರ್ ಕಾರ್ಡನ್ನು ಪರಿಶೀಲಿಸಿದ. ಕುಟ್ಟಪ್ಪನ ಮಾಸಲು ಪಟ ಇತ್ತು.

ನಂತರ ನಾವು ಕುಟ್ಟಪ್ಪನ ಮನೆಯತ್ತ ನಡೆದೆವು. ಮನೆಯ ಬಾಗಿಲು ಹಾಕಿತ್ತು. ಕಿಟಕಿಗಳೆಲ್ಲಾ ಮುಚ್ಚಿದ್ದವು. ಎಡಪಕ್ಕದಲ್ಲಿದ್ದ ಗ್ಯಾರೇಜಿನ ಷಟರ್ ಮುಚ್ಚಿತ್ತು. ಕರಮಚಂದ ಎಚ್ಚರಿಕೆಯಿಂದ ಸ್ಥಳ ಪರೀಕ್ಷೆಗೆ ತೊಡಗಿದ. ಅಲ್ಲಿ ಕೆಲವೆಡೆ ಮಣ್ಣಿನಲ್ಲಿ ವಾಹನದ ಟಯರಿನ ಗುರುತುಗಳಿದ್ದವು.

'ಬಿದ್ದಪ್ಪ, ಇದು ಮಹೀಂದ್ರಾ ಪಿಕ್‌ಅಪ್ ವಾಹನದ ಟಯರುಗಳ ಗುರುತು' ಎಂದು ಕರಮಚಂದ ಉದ್ಗರಿಸಿದ.

ಆತನಲ್ಲಿರುವುದು ಅದೇ ವಾಹನವೆಂದು ದೇವಯ್ಯ ಖಚಿತಪಡಿಸಿದ. ಹುಡುಕಾಟದಲ್ಲಿ ನಮಗೆ ಅಲ್ಲಿ ಇನ್ನೇನೂ ಗಮನ ಸೆಳೆಯುವಂತಹದು ಕಾಣಿಸಲಿಲ್ಲ. ಮನೆಯ ಹಿಂದುಗಡೆಯಲ್ಲಿ ಕಾಡು ಸಸ್ಯಗಳು, ಹುಲ್ಲುಗಳು ಬೆಳೆದಿದ್ದವು. ಕೆಲವಷ್ಟನ್ನು ಕತ್ತರಿಸಿದ ಕುರುಹುಗಳಿದ್ದವು. ಕುಟ್ಟಪ್ಪ ಮನೆಯೊಳಗಿದ್ದಂತಿರಲಿಲ್ಲ. ಕರಮಚಂದ ಅಂಗುಲ ಅಂಗುಲವನ್ನೂ ಪರೀಕ್ಷಿಸುತ್ತಾ ಹೆಜ್ಜೆ ಹಾಕುತ್ತಿದ್ದ. ಅಲ್ಲೊಂದು ಕಿಟಕಿಯ ಸನಿಹ ಒಂದು ವಸ್ತು ಕರಮಚಂದನ ಗಮನ ಸೆಳೆಯಿತು. ಆತ ಅದನ್ನೆತ್ತಿ ನಜರು ಹರಿಸಿದ. ಅದೊಂದು ಉರಿದ ಬೀಡಿಯ ತುಂಡು! ಕರಮಚಂದ ಅದನ್ನು ಮೂಗಿನ ಬಳಿ ಹಿಡಿದು ವಾಸನೆ ಎಳೆದುಕೊಂಡ.

'ಬಿದ್ದಪ್ಪ, ಇದು ಕಿಂಗ್ ಬ್ರಾಂಡ್ ಅಥವಾ ಮಾರ್ಟಿನ್ ಬ್ರಾಂಡಿನ ಬೀಡಿ. ಬೀಡಿಗಳ ಬಗ್ಗೆ ನನ್ನ ಲೇಖನವೊಂದರಲ್ಲಿ ನಾನು ಇದರ ಪ್ರಸ್ತಾಪ ಮಾಡಿದ್ದೇನೆ. ಇವೆರಡರ ಪರಿಮಳ ಬಹುತೇಕ ಒಂದೇ. ಆದರೆ ಮಾರ್ಟಿನ್ ಬ್ರಾಂಡಿನ ಬೀಡಿ, ಕೆಲಸಗಾರರ ಸಮಸ್ಯೆಯಿಂದಾಗಿ, ಇತ್ತೀಚೆಗೆ ಮಾರುಕಟ್ಟೆಗೆ ಬರುತ್ತಿಲ್ಲ. ಕಿಂಗ್ ಬ್ರಾಂಡ್ ಕೇರಳ ಮೂಲದ್ದು. ಅದು ಕುಟ್ಟ ಮತ್ತು ಆಸುಪಾಸಿನಲ್ಲಿ ಮಾತ್ರ ಲಭ್ಯವಿದೆ'. ಕರಮಚಂದ ಅಭಿಪ್ರಾಯ ವ್ಯಕ್ತಪಡಿಸಿದ.

ಯಾವುದೇ ವಿಷಯವಾದರೂ ಆಳವಾಗಿ ಅಭ್ಯಸಿಸುವುದು ಕರಮಚಂದನ ಸ್ವಭಾವ. ಆತ ಬೀಡಿಯ ಬಗೆಗೂ ಸಾಕಷ್ಟು ಅಧ್ಯಯನ ನಡೆಸಿರುವುದನ್ನು ನಾನು ಬಲ್ಲೆ.

'ಕುಟ್ಟಪ್ಪ ಬೀಡಿ ಸೇದುವುದನ್ನು ನಾನೆಂದೂ ಕಂಡಿಲ್ಲ!' – ದೇವಯ್ಯನ ನುಡಿಗಳು.

ಆ ಜಾಗದಲ್ಲಿ ತುಸು ಆಳವಾಗಿ ಹೆಜ್ಜೆಗುರುತುಗಳೂ ಮೂಡಿದ್ದವು. ನಿಂತಿದ್ದ ವ್ಯಕ್ತಿ ಪಾದದಡಿಯಲ್ಲಿ ಮುಳ್ಳುಗಳಿರುವ ಶೂ ಧರಿಸಿದಂತೆ, ಚಿಕ್ಕ ಚಿಕ್ಕ ರಂಧ್ರಗಳು ಮಣ್ಣಿನಲ್ಲಿ ಸೃಷ್ಟಿಯಾಗಿದ್ದವು. ಅಷ್ಟರಲ್ಲಿ ನನಗೆ ಕಿಟಕಿಯೊಂದರ ಕದವನ್ನು ತುಸು ಸರಿಸಿ ಇಣುಕುತ್ತಿರುವ ಕಣ್ಣುಗಳೆರಡು ಗೋಚರಿಸಿದವು! ತಕ್ಷಣ ಕರಮಚಂದನನ್ನು ಎಚ್ಚರಿಸಿದೆ. ದೇವಯ್ಯನೂ ಗಮನಿಸಿದ. ಇಣುಕುತ್ತಿದ್ದ ವ್ಯಕ್ತಿಗೆ ತಾನು ದೃಷ್ಟಿಗೆ ಬಿದ್ದುದು ಗೊತ್ತಾಗಿರಬೇಕು. ಏಕಾಏಕಿ ಆತ ಮಾಯವಾದ. ಕೆಲ ಕ್ಷಣಗಳಲ್ಲಿ ಪಕ್ಕದ ಕೋಣೆಯ ಅಗುಳಿ ಸರಿಸುವ ದನಿ ತೂರಿಬಂತು. ವ್ಯಕ್ತಿಯೊಬ್ಬ ಬಾಗಿಲು ಸರಿಸಿ, ಹೊರಬಂದ. ನಾನು ತಕ್ಷಣ ಆತನನ್ನು ಗುರುತಿಸಿದೆ. ಆತ ಕುಟ್ಟಪ್ಪ! ಈಗಷ್ಟೇ ಆಧಾರ್ ಕಾರ್ಡಿನಲ್ಲಿ ನೋಡಿದ್ದೆ! ಆದರೆ ಒಂದೇ ವ್ಯತ್ಯಾಸ. ಹಣೆಯಲ್ಲಿ ಢಾಳಾಗಿ ಕಾಣುವ ಎರಡು ಗೀರುಗಳು!

'ದೇವಯ್ಯ, ಇವರೆಲ್ಲಾ ಯಾರು? ನನ್ನ ಮನೆಯ ಕಾಂಪೌಂಡಿನಲ್ಲಿ ಏನು ಮಾಡ್ತಿದ್ದೀರಿ?'

'ನಾನಾಗಲೇ ಹೇಳಿದ್ದೆನಲ್ಲ. ಇವರೇ ಅಡ್ಡಂಡ ಕರಮಚಂದ. ಇವರು ಮಾಚಿಮಾಡ ಪ್ರಸಾದ್ ಬಿದ್ದಪ್ಪ. ಆ ಅಪರಿಚಿತನ ಬಗ್ಗೆ ತನಿಖೆ ಮಾಡಲು ಬಂದಿದ್ದಾರೆ.'

'ತನಿಖೆ ಮತ್ತೆ ಮುಂದುವರೆಸಿ. ಮೊದಲು, ಬಿಸಿಯಾದ ಕಾಫಿ ಕುಡಿಯೋಣವಂತೆ.'

ನಾವು ಆತನ ಮನೆಯೊಳಗೆ ಹೋದೆವು. ಹಜಾರದಲ್ಲಿ ಹೆಚ್ಚು ಪೀಠೋಪಕರಣಗಳಿರಲಿಲ್ಲ. ಸದಾ ಕಾಲ ಬಾಗಿಲು ಮುಚ್ಚಿ ಗಾಳಿಯಾಡದೇ ಇದ್ದುದರಿಂದಲೋ ಏನೋ, ಒಂದು ರೀತಿಯ ಕಮಟು ವಾಸನೆ ಮನೆಯೊಳಗೆ ಹರಡಿತ್ತು. ಪೀಠೋಪಕರಣಗಳ ದಾಸ್ತಾನು ಇಡಲು ದೊಡ್ಡ ಮನೆ ಬೇಕೆಂದು ಕುಟ್ಟಪ್ಪ ಹೇಳಿದ್ದನೆಂಬ ಮಾತು ನೆನಪಾಯಿತು. ಆದರೆ ಮನೆ ಖಾಲಿಯಾಗಿದೆ!



'ಕುಟ್ಟಪ್ಪ, ನಿಮ್ಮ ಕಪಾಟುಗಳ ದಾಸ್ತಾನು ಕಾಣಿಸುತ್ತಿಲ್ಲ!' ನನ್ನ ಅನುಮಾನವನ್ನು ಕರಮಚಂದ ಧ್ವನಿಸಿದ.

'ಇದ್ದ ಮಾಲೆಲ್ಲಾ ಮಾರಿ ಹೋಗಿದೆ. ಹೊಸ ಸರಕು ಬರಬೇಕಷ್ಟೇ. ಕೆಲಸಗಾರರ ಮುಷ್ಕರದಿಂದಾಗಿ ವಿಳಂಬವಾಗಬಹುದೆಂದು ಕಂಪನಿ ಹೇಳಿದೆ.'

ಕರಮಚಂದ ಅಡುಗೆಕೋಣೆಗೆ ನುಗ್ಗಿದ. ಅಲ್ಲಿಯೂ ವಿಶೇಷವೇನೂ ನಮ್ಮ ದೃಷ್ಟಿಗೆ ಬೀಳಲಿಲ್ಲ.

'ತರಕಾರಿ ಕತ್ತರಿಸುತ್ತಿರುವಾಗ, ಸೊಳ್ಳೆಯೊಂದು ಹಣೆಯಲ್ಲಿ ಕಚ್ಚಿ ತುರಿಕೆಯಾಯಿತು. ಗಡಿಬಿಡಿಯಲ್ಲಿ ಕೈಯಲ್ಲಿದ್ದ ಚೂರಿಯಿಂದ ಮೆಲ್ಲನೆ ತುರಿಸಿದೆ. ಆದರೆ ಒತ್ತಡ ಜಾಸ್ತಿ ಹಾಕಿದ್ದರಿಂದ, ಎರಡು ಗೀರುಗಳು ಮೂಡಿದವು'. ಕುಟ್ಟಪ್ಪನ ಸ್ಪಷ್ಟೀಕರಣ.

ಕರಮಚಂದ ಮೊಬೈಲು ತೆಗೆದು, ಅದರಲ್ಲಿ ಬೆರಳಾಡಿಸಿದ. ಕಿವಿಯ ಬಳಿ ಹಿಡಿದವನು, ಸ್ವರ ಹೊರಡಿಸಿದ,

'ಓಹ್! ಸರಿಯಾಗಿ ಸಿಗ್ನಲ್ ಸಿಗ್ತಿಲ್ಲ. ಒಂದು ಅರ್ಜೆಂಟ್ ಕರೆ ಮಾಡುವುದಿತ್ತು'.

ಹಾಗೆಂದು ಕರಮಚಂದ ಹೊರಕ್ಕೆ ಧಾವಿಸಿದ.

'ಇಲ್ಲಿ ಸಾಧಾರಣವಾಗಿ ಎಲ್ಲವೂ ಸಿಗುತ್ತೆ. ಅವರದ್ದು ಯಾವ ನೆಟ್ ವರ್ಕ್?' ದೇವಯ್ಯ ಪ್ರಶ್ನೆ ಹಾಕಿದ.

'ಮೊಬೈಲ್ ಸಿಗ್ನಲ್ ಕೆಲವೊಮ್ಮೆ ಹೇಳೋಕಾಗೋಲ್ಲ. ಟ್ರಾಫಿಕ್ ಜಾಸ್ತಿ ಇದ್ದರೆ ಸಿಗೋಲ್ಲ'. ನಾನು ಪ್ರತಿಯಾಡಿದೆ.

ನಾವು ಹಜಾರಕ್ಕೆ ಬಂದೆವು. ಕೈಯನ್ನು ಮೇಲೂ ಕೆಳಗೂ ಆಡಿಸುತ್ತಾ, ರಸ್ತೆಯಲ್ಲಿ ಕರಮಚಂದ ನಡೆದು ಹೋಗುತ್ತಿರುವುದು ಕಿಟಕಿಯಲ್ಲಿ ಕಾಣಿಸಿತು. ತುಸು ಹೊತ್ತಿನಲ್ಲಿ ದೂರದ ತಿರುವಿನಲ್ಲಿ ಆತ ಮಾಯವಾದ. ಸುಮಾರು ಹದಿನೈದು ನಿಮಿಷಗಳಲ್ಲಿ ಆತ ಹಿಂದಿರುಗುವವರೆಗೆ, ನಾವು ಕುಟ್ಟಪ್ಪನೊಡನೆ ಆತನ ವ್ಯವಹಾರದ ಬಗ್ಗೆ ಮಾತನಾಡುತ್ತಾ ಸಮಯ ಕಳೆದೆವು.

'ಕ್ಷಮಿಸಿ, ನಿಮ್ಮನ್ನು ಕಾಯಿಸಿದ್ದಕ್ಕೆ!' ಕರಮಚಂದ ಔಪಚಾರಿಕವಾಗಿ ನುಡಿದ.

'ನಿಮ್ದು ಯಾವ ನೆಟ್ ವರ್ಕ್?' ದೇವಯ್ಯನದ್ದು ಅದೇ ಪ್ರಶ್ನೆ.

'ಅದು ಟವರ್ ಸಮಸ್ಯೆಯಲ್ಲ. ನಂದು ಹಳೆಯ ಮೊಬೈಲ್' – ಕರಮಚಂದನ ವಿವರಣೆ ನನ್ನನ್ನು ಚಕಿತಗೊಳಿಸಿತು. ಯಾಕೆಂದರೆ, ಕಳೆದ ತಿಂಗಳಷ್ಟೇ ಆತ ಹೊಸ ಮೊಬೈಲು ಖರೀದಿಸಿದ್ದು!

'ಕುಟ್ಟಪ್ಪ, ನಾವು ಬಂದ ಉದ್ದೇಶ ಆ ಅಪರಿಚಿತನನ್ನು ಪತ್ತೆ ಮಾಡುವುದಷ್ಟೇ'.